# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2020-21 ನೇ ಸಾಲಿನಲ್ಲಿ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ರಿಯಾಯಿತಿ ಬಡ್ಡಿದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ನೀಡುವ ಬಗ್ಗೆ.

**ಓದಲಾಗಿದೆ:** ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಸಿಆರ್‌ಡಿ/ ಸಿಎಬಿ-1/2/2020-21, ದಿನಾಂಕ: 30-06-2020

***

**ಪ್ರಸ್ತಾವನೆ :**

ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೇ.3 ರ ಬಡ್ಡಿದರದಲ್ಲಿ ರೂ.10.00 ಲಕ್ಷಗಳವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ನೀಡಲು 2019-20ರಲ್ಲಿ ಹೊರಡಿಸಿರುವ ಆದೇಶದಲ್ಲಿ ಹೆಚ್ಚುವರಿಯಾಗಿ ಷರತ್ತುಗಳನ್ನು ಅಳವಡಿಸಿ 2020-21 ನೇ ಸಾಲಿಗೆ ಅನ್ವಯಿಸುವಂತೆ ಆದೇಶ ಹೊರಡಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ರೈತರು ಕೃಷಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡು ಕೃಷಿ ಉತ್ಪಾದಕತೆ ಮತ್ತು ಆದಾಯವನ್ನು ಹೆಚ್ಚಿಸಲು ಅನುಕೂಲ ಮಾಡಿಕೊಡುವ ಸಲುವಾಗಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 272 ಸಿಎಲ್‌ಎಸ್ 2020, ಬೆಂಗಳೂರು, ದಿ: 07.10.2020**

ರಾಜ್ಯದ ರೈತರಿಗೆ ಸಹಕಾರಿ ಸಂಸ್ಥೆಗಳು ಶೇ.3 ರ ಬಡ್ಡಿ ದರ ಅನ್ವಯವಾಗುವಂತೆ ಒಂದು ಕುಟುಂಬಕ್ಕೆ ಗರಿಷ್ಠ ರೂ.10.00 ಲಕ್ಷಗಳವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆಯನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಜಾರಿಗೊಳಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

1. ಈ ಯೋಜನೆಯು ಗೊತ್ತುಪಡಿಸಿದ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ಅಂದರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು, ಟಿಬೇಟಿಯನ್ ಸಹಕಾರ ಸಂಸ್ಥೆಗಳು, ಲ್ಯಾಂಪ್ಸ್ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ರೈತರಿಗೆ ನೇರವಾಗಿ ವಿತರಿಸುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ /ಕೃಷಿ ಸಂಬಂಧಿತ ಸಾಲಗಳಿಗೆ ಅನ್ವಯಿಸುತ್ತದೆ. (ಪಟ್ಟಣ ಸಹಕಾರ ಬ್ಯಾಂಕುಗಳು ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ ಹಾಗೂ ಮೇಲಿನ ಸಂಸ್ಥೆಗಳು ಕಂಪನಿಗಳಿಗೆ ನೀಡುವ ಸಾಲಗಳಿಗೆ ಅನ್ವಯವಾಗುವುದಿಲ್ಲ).

2. ಪತ್ತಿನ ಸಹಕಾರಿ ಸಂಸ್ಥೆಗಳು ತನ್ನ ರೈತ ಸದಸ್ಯರಿಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲಗಳನ್ನು ಶೇಕಡಾ 3ರ ಬಡ್ಡಿ ದರದಲ್ಲಿ ಒದಗಿಸುವ ಯೋಜನೆಯು ಒಂದು ಕುಟುಂಬಕ್ಕೆ ಗರಿಷ್ಠ ರೂ.10.00 ಲಕ್ಷಗಳ ವರೆಗಿನ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಅಲ್ಪಾವಧಿ ಬೆಳೆ ಸಾಲ ಮತ್ತು ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಮಿತಿ ಒಂದು ಕುಟುಂಬಕ್ಕೆ ಪ್ರತ್ಯೇಕವಾಗಿ ಅನ್ವಯವಾಗುತ್ತದೆ.

2....

3. ಒಂದು ಕುಟುಂಬದಲ್ಲಿನ ಎಲ್ಲಾ ಸದಸ್ಯರಿಗೆ ಒಟ್ಟಾರೆ ಸೇರಿ ಗರಿಷ್ಠ 10 ವರ್ಷಗಳ ಸಾಲ ಮರುಪಾವತಿ ಅವಧಿಗೆ ಗರಿಷ್ಠ ರೂ.4.00 ಲಕ್ಷಗಳ ವರೆಗಿನ ಬಡ್ಡಿ ಸಹಾಯಧನ ದೊರೆಯುವುದು. 2004 ರಿಂದ ಬಡ್ಡಿ ಸಹಾಯಧನ ಯೋಜನೆಯಲ್ಲಿ ಈಗಾಗಲೇ ಕುಟುಂಬದ ಸದಸ್ಯರು ರೂ.4.00 ಲಕ್ಷಕ್ಕಿಂತ ಕಡಿಮೆ ಬಡ್ಡಿ ಸಹಾಯಧನ ಪಡೆದಿದ್ದರೆ ಉಳಿದ ಬಡ್ಡಿ ಸಹಾಯದನಕ್ಕೆ ಮಾತ್ರ ಬಡ್ಡಿ ಸಹಾಯಧನ ಲಭ್ಯವಿರುತ್ತದೆ. ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಅವಲಂಬಿತ ಮಕ್ಕಳನ್ನು ಒಳಗೊಂಡಿರುತ್ತದೆ. ಇದಕ್ಕಾಗಿ ರೇಷನ್ ಕಾರ್ಡ್, ಆಧಾರ್ ಕಾರ್ಡ್ ಮತ್ತು ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಒಂದು ಕುಟುಂಬದಲ್ಲಿ ಎಲ್ಲಾ ಸದಸ್ಯರು ಸೇರಿ ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲವನ್ನು ವಿವಿಧ ಉದ್ದೇಶಗಳಿಗೆ ಪಡೆದಿದ್ದರೂ ಸಹ ಒಟ್ಟು ಸಾಲದ ಹೊರಬಾಕಿ ರೂ.10.00 ಲಕ್ಷಗಳಿಗೆ ಮಾತ್ರ ಬಡ್ಡಿ ಸಹಾಯಧನ ನೀಡಲಾಗುವುದು.

4. ನಬಾರ್ಡ್ ಗುರುತಿಸಿದ ಕೃಷಿ / ಕೃಷಿ ಸಂಬಂಧಿತ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಪೈಕಿ ಲಘು ನೀರಾವರಿ, ಭೂ ಅಭಿವೃದ್ಧಿ, ಕೃಷಿ ಯಾಂತ್ರೀಕರಣ, ಪ್ಲಾಂಟೇಷನ್ ಹಾಗೂ ತೋಟಗಾರಿಕೆ ಅಭಿವೃದ್ಧಿ, ಸಾವಯವ ಕೃಷಿ, ಪಶುಸಂಗೋಪನೆ ಹಾಗೂ ಹೈನುಗಾರಿಕೆ, ಮೀನು ಕೃಷಿ, ರೇಷ್ಮೆ ಕೃಷಿ, ಜೇನು ಸಾಕಾಣಿಕೆ ಉದ್ದೇಶಗಳಿಗೆ ರೈತರಿಗೆ ನೀಡಲಾಗುವ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಯೋಜನೆಯು ಕೊಯ್ಲು (Harvest)) ವರೆಗಿನ ಮತ್ತು ಕೊಯ್ಲು ನಂತರದ ಕೃಷಿ ಚಟುವಟಿಕೆಗಳಿಗೆ ಅಂದರೆ ಮಾರುಕಟ್ಟೆಗೆ ಕೃಷಿ ಉತ್ಪನ್ನ ಸಿದ್ಧವಾಗುವ ಹಂತದ ವರೆಗೆ (threshing, winnowing, cleaning, grading, drying)) ಅವಶ್ಯವಿರುವ ಕೃಷಿ ಯಂತ್ರೋಪಕರಣ/ಘಟಕಗಳನ್ನು ಹೊಂದಲು ನೀಡುವ ಸಾಲಗಳಿಗೂ ಸಹ ಅನ್ವಯವಾಗುತ್ತದೆ. ದ್ವಿಚಕ್ರ ವಾಹನ, ಜೀಪು, ಪಿಕಪ್ ವ್ಯಾನ್ ಹಾಗೂ ಇನ್ನು ಮುಂತಾದ ಯಾವುದೇ ಕೃಷಿ ಸಾಗಾಣಿಕೆಗೆ ಬಳಸುವ ವಾಹನ ಸಾಲಗಳಿಗೆ, ತೋಟದ ಮನೆ, ಗ್ರಾಮೀಣ ಗೋದಾಮು ಗಳಿಗೆ, ದ್ವಿತೀಯ ಸಂಸ್ಕರಣೆ, ಕೃಷಿ ಉತ್ಪನ್ನಗಳ ಮೌಲ್ಯ ವರ್ಧನೆ/ಆಹಾರ ಸಂಸ್ಕರಣೆ, ಕೃಷಿ ಕ್ಲಿನಿಕ್‌ಗೆ ನೀಡುವ ಸಾಲಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ ಹಾಗೂ ಇಂತಹ ಸಾಲಗಳಿಗೆ ಬ್ಯಾಂಕು ನಿಗದಿಪಡಿಸಿದ ಸಾಮಾನ್ಯ ಬಡ್ಡಿ ದರದಲ್ಲಿ ಸಾಲ ವಿತರಿಸಬಹುದಾಗಿದೆ. ರೈತರು ಸಾಲದಿಂದ ನಿರ್ಮಿಸುವ ಘಟಕ/ಯಂತ್ರೋಪಕರಣಗಳು ಕನಿಷ್ಠ ಶೇ.25 ರಷ್ಟು ಸ್ವಂತಕ್ಕೆ ಉಪಯೋಗಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದು.

5. ಈ ಯೋಜನೆಯು ಪತ್ತಿನ ಸಹಕಾರಿ ಸಂಸ್ಥೆಗಳು ನೀಡುವ ಕೃಷಿಯೇತರ ಸಾಲಗಳಿಗೆ ಅನ್ವಯಿಸುವುದಿಲ್ಲ.

6. ರೈತನು ಎರಡು ಸಂಘಗಳ ಕಾರ್ಯ ವ್ಯಾಪ್ತಿಯಲ್ಲಿ ಬೇರೆ ಬೇರೆ ಭೂಮಿ ಹೊಂದಿದ್ದರೆ ಅಥವಾ ಭೂಮಿ ಮತ್ತು ವಾಸ ಸ್ಥಳ ವಿವಿಧ ಸಂಘದ ವ್ಯಾಪ್ತಿಯಲ್ಲಿದ್ದರೆ ಯಾವ ಸಂಘದ ವ್ಯಾಪ್ತಿಯಲ್ಲಿ ವಾಸವಿರುತ್ತಾನೆಯೋ ಆ ಸಂಘದಲ್ಲಿ ಪಡೆದ ಸಾಲಗಳಿಗೆ ಮಾತ್ರ ಬಡ್ಡಿ ಸಹಾಯಧನ ಅನ್ವಯವಾಗುತ್ತದೆ. ಒಂದು ವೇಳೆ ರೈತನು ವಾಸಿಸುತ್ತಿರುವ ಪ್ರದೇಶದಲ್ಲಿ ಸಂಘವು ಇಲ್ಲದೇ ಇದ್ದರೆ ಅಥವಾ ಸಾಲ ನೀಡಲು ಸಂಘವು ಸಶಕ್ತರಾಗಿಲ್ಲದಿದ್ದರೆ ಅಂತಹ ಸಂಘದಿಂದ ನಿರಾಪೇಕ್ಷಣಾ ಪತ್ರ ಪಡೆದು ಸಂಬಂಧಿಸಿದ ಡಿಸಿಸಿ ಬ್ಯಾಂಕುಗಳ ಶಾಖೆಗಳಲ್ಲಿ ಸಾಲ ವಿತರಿಸತಕ್ಕದ್ದು. ರೈತನು ಆಧಾರ್ ನೀಡುವುದು ಕಡ್ಡಾಯವಾಗಿದ್ದು, ಆಧಾರ್ ಕಾರ್ಡ್ ನಲ್ಲಿ ಇರುವ ವಿಳಾಸವನ್ನು ವಾಸ ಸ್ಥಳ ಎಂದು ಪರಿಗಣಿಸತಕ್ಕದ್ದು. ರೈತನು ನೆರೆ ರಾಜ್ಯದಲ್ಲಿ ವಾಸವಿದ್ದು, ಕರ್ನಾಟಕ ರಾಜ್ಯದಲ್ಲಿ ಭೂಮಿ ಇದ್ದರೆ ಅಂತಹ ರೈತನಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

7. ಮೂರು ಹಂತದ ಅಲ್ಪಾವಧಿ/ಮಧ್ಯಮಾವಧಿ ಸಹಕಾರ ಸಂಘಗಳು/ಬ್ಯಾಂಕುಗಳು ತಮ್ಮ ತಮ್ಮ ಅಧೀನದಲ್ಲಿ ಬರುವ ಸಹಕಾರ ಸಂಘಗಳು/ಬ್ಯಾಂಕುಗಳಿಗೆ/ರೈತರಿಗೆ ಆಕರಣೆ ಮಾಡಬೇಕಾದ, ವಸೂಲು ಮಾಡಬೇಕಾದ ಬಡ್ಡಿದರ ಮತ್ತು ಸರ್ಕಾರದಿಂದ ನೀಡುವ ಬಡ್ಡಿ ಸಹಾಯಧನ ದರವನ್ನು ಈ ಕೆಳಗೆ ನೀಡಿದೆ.

a. ಅಪೆಕ್ಸ್ ಬ್ಯಾಂಕ್ ನಬಾರ್ಡ್‌ನಿಂದ ರಿಯಾಯತಿ ಬಡ್ಡಿ ದರದಲ್ಲಿ ಪಡೆದ ಸಾಲಕ್ಕೆ ನಬಾರ್ಡ್ ನಿಗದಿಪಡಿಸಿದ ಬಡ್ಡಿ ದರಕ್ಕೆ ಅಪೆಕ್ಸ್ ಬ್ಯಾಂಕ್ ಮಾರ್ಜಿನ್ ದರ ಶೇ.0.30 ನ್ನು ಸೇರಿಸಿ ಬಡ್ಡಿ ಆಕರಣೆ ಮಾಡಿ ಡಿಸಿಸಿ ಬ್ಯಾಂಕುಗಳಿಗೆ ಸಾಲ ವಿತರಿಸಬೇಕು. ಅಪೆಕ್ಸ್ ಬ್ಯಾಂಕ್ ತನ್ನ ಸ್ವಂತ ಬಂಡವಾಳದಲ್ಲಿ ವಿತರಿಸಿದ ಸಾಲಗಳಿಗೆ ತನ್ನ ಯುಕ್ತ ಬಡ್ಡಿದರದಲ್ಲಿ ಸಾಲ ವಿತರಿಸುವುದು.

b. ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಪ್ಯಾಕ್ಸ್ ಗಳಿಗೆ ಶೇ.7.9 ರ ಬಡ್ಡಿದರವನ್ನು ಬಡ್ಡಿ ಆಕರಣೆ ಮಾಡಿ ಸಾಲ ವಿತರಿಸತಕ್ಕದ್ದು. ಇದಕ್ಕಾಗಿ ರೈತರು ಪಾವತಿಸುವ ಶೇ.3 ರ ಬಡ್ಡಿ ದರದಲ್ಲಿ ಪ್ಯಾಕ್ಸ್ ಮಾರ್ಜಿನ್ ಶೇ.2 ನ್ನು ಉಳಿಸಿಕೊಂಡು ಶೇ.1 ರ ಬಡ್ಡಿಯನ್ನು ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಪಡೆಯತಕ್ಕದ್ದು, ನಿಗದಿತ ಅವಧಿಯಲ್ಲಿ ವಸೂಲಾದ ಸಾಲಗಳಿಗೆ ಪ್ಯಾಕ್ಸ್ ಗಳಿಂದ ಯಾವುದೇ ಬಡ್ಡಿಯನ್ನು ವಸೂಲು ಮಾಡಬಾರದು. ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಬಡ್ಡಿ ಸಹಾಯಧನದಿಂದ ಮಾತ್ರ ಡಿಸಿಸಿ ಬ್ಯಾಂಕುಗಳು/ವಾಣಿಜ್ಯ ಬ್ಯಾಂಕುಗಳು ಬಡ್ಡಿ ಜಮಾ ಪಡೆಯತಕ್ಕದ್ದು.

c. ಪ್ಯಾಕ್ಸ್‌ಗಳು ರೈತರಿಗೆ (ಸ್ವಂತ ಬಂಡವಾಳ ಅಥವಾ ಡಿಸಿಸಿ ಬ್ಯಾಂಕಿನ ಬಂಡವಾಳದಿಂದ) ಶೇ.9.9 ರ ಬಡ್ಡಿ ಆಕರಿಸಿ ಸಾಲ ವಿತರಿಸತಕ್ಕದ್ದು, ರೈತರು ನಿಗದಿತ ಅವಧಿಯಲ್ಲಿ ಸಾಲ/ಕಂತನ್ನು ಮರುಪಾವತಿಸಿದಲ್ಲಿ ಶೇ.3 ಬಡ್ಡಿಯನ್ನು ಮಾತ್ರ ಪಡೆದು, ರಾಜ್ಯ ಸರ್ಕಾರದಿಂದ ಶೇ.6.9 ಬಡ್ಡಿ ಸಹಾಯಧನವನ್ನು ಕ್ಲೇಮು ಮಾಡತಕ್ಕದ್ದು. ಇದಕ್ಕಾಗಿ ರೈತರ ಬಡ್ಡಿ ಖಾತೆಗೆ ಮೊದಲು ಜಮಾ ನೀಡಿ ರಾಜ್ಯ ಸರ್ಕಾರದಿಂದ ಕ್ಲೇಮು ಮಾಡತಕ್ಕದ್ದು. ಇದರಿಂದ ರೈತರಿಗೆ ಶೇ.3 ಬಡ್ಡಿದರದಲ್ಲಿ ಸಾಲ ದೊರೆಯುತ್ತದೆ. ಡಿಸಿಸಿ ಬ್ಯಾಂಕುಗಳು ನೇರವಾಗಿ ಶಾಖೆಗಳ ಮೂಲಕ ಸಾಲ ವಿತರಿಸಿದಲ್ಲಿ ರೈತರಿಗೆ ಶೇ.8.80 ರ ಬಡ್ಡಿ ದರದಲ್ಲಿ ಸಾಲ ವಿತರಿಸತಕ್ಕದ್ದು, ರೈತರು ನಿಗಧಿತ ಅವಧಿಯಲ್ಲಿ ಸಾಲ/ಕಂತು ಮರುಪಾವತಿಸಿದಲ್ಲಿ ರೈತರಿಂದ ಶೇ.3 ರ ಬಡ್ಡಿಯನ್ನು ಪಡೆದು, ರಾಜ್ಯ ಸರ್ಕಾರದಿಂದ ಶೇ.5.80 ಬಡ್ಡಿ ಸಹಾಯಧನವನ್ನು ಕ್ಲೇಮು ಮಾಡತಕ್ಕದ್ದು. ಸುಸ್ತಿಯಾದ ಸಾಲಗಳಿಗೆ ಬ್ಯಾಂಕುಗಳು/ಸಂಘಗಳು ಸಾಮಾನ್ಯ ಬಡ್ಡಿ ದರ ನಿಗದಿಪಡಿಸಬಹುದು.

d. ನಬಾರ್ಡ್‌ನಿಂದ ಪುನರ್ಧನ ಪಡೆಯಲು ಅರ್ಹವಿಲ್ಲದೇ ಇರುವ ಡಿಸಿಸಿ ಬ್ಯಾಂಕುಗಳು ಹೆಚ್ಚಿನ ಬಡ್ಡಿ ದರದ ಬಂಡವಾಳವನ್ನು ಹೊಂದಿದಲ್ಲಿ ಅಂತಹ ಬ್ಯಾಂಕುಗಳಿಗೆ ಪ್ಯಾಕ್ಸ್ ಮತ್ತು ಅಪೆಕ್ಸ್ ಬ್ಯಾಂಕಿನ ಮಾರ್ಜಿನ್ ಮೊತ್ತವನ್ನು ನಿಗದಿಪಡಿಸಲು ಇಂತಹ ಪ್ರಕರಣಗಳಿಗೆ ಸರ್ಕಾರಕ್ಕೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸುವುದು.

8. ಎರಡು ಹಂತದ ದೀರ್ಘಾವಧಿ ಸಹಕಾರ ಸಂಘಗಳು ಅಂದರೆ ಕಸ್ಕಾರ್ಡ್ ಬ್ಯಾಂಕ್ ಮತ್ತು ಪಿಕಾರ್ಡ್ ಬ್ಯಾಂಕುಗಳು ಮೇಲಿನ ರೀತಿಯಲ್ಲಿ ಬಡ್ಡಿ ದರಗಳನ್ನು ನಿಗದಿಪಡಿಸಲು ನಿಬಂಧಕರ ಮೂಲಕ ಸರ್ಕಾರಕ್ಕೆ ಪ್ರಸ್ತಾವೆ ಸಲ್ಲಿಸಿ ಅನುಮೋದನೆ ಪಡೆಯತಕ್ಕದ್ದು.

9. ಪ್ಯಾಕ್ಸ್ ಗಳು ಡಿಸಿಸಿ ಬ್ಯಾಂಕಿನ/ಸಾಲ ನೀಡುವ ಬ್ಯಾಂಕಿನ ಬಂಡವಾಳ ಅಥವಾ ಸ್ವಂತ ಬಂಡವಾಳದಲ್ಲಿ ರೈತರಿಗೆ ವಿತರಿಸುವ ಎಲ್ಲಾ ಹಂತದ ಸಾಲಗಳನ್ನು ಕಡ್ಡಾಯವಾಗಿ ಡಿಸಿಸಿ ಬ್ಯಾಂಕ್ ಅಥವಾ ಅಧ್ಯರ್ಪಿತಗೊಂಡ ವಾಣಿಜ್ಯ ಬ್ಯಾಂಕಿನಲ್ಲಿ ರೈತರು ಹೊಂದಿರುವ ಉಳಿತಾಯ ಖಾತೆಗಳ ಮೂಲಕವೇ ವಿತರಿಸತಕ್ಕದ್ದು.

10. ಈ ಯೋಜನೆಯಡಿ ವಿತರಿಸಲಾದ ಕೃಷಿ/ಕೃಷಿ ಸಂಬಂಧಿತ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರದ ಬದ್ಧತೆಯ ಸಾಲದ ಅವಧಿಗೆ ಸೀಮಿತವಾಗಿರುತ್ತದೆ. ಆದಾಗ್ಯೂ ರೈತರು ನಿಗಧಿತ ದಿನಾಂಕದಂದು ಸಾಲ ಮರುಪಾವತಿಸಲು ವಿಫಲರಾಗಿ ಸುಸ್ತಿದಾರರಾದಲ್ಲಿ ಅಥವಾ ಕ್ಲೇಂ ಮೊತ್ತವನ್ನು ಯಾವುದೇ ಕಾರಣಗಳಿಂದಾಗಿ ವಿಳಂಬವಾದಲ್ಲಿ ಸರ್ಕಾರದ ಬದ್ಧತೆ ಇರುವುದಿಲ್ಲ. ಸಾಲಗಾರರು ಇಂತಹ ಮುದ್ದತ್ತು ಮೀರಿದ ಕಂತುಗಳಲ್ಲಿ ಇರುವ ಸಾಲಗಳನ್ನು ಸಾಮಾನ್ಯ ಬಡ್ಡಿಯ ದರದಲ್ಲಿ ಇತರ ವೆಚ್ಚಗಳೊಂದಿಗೆ ಮರುಪಾವತಿಸಬೇಕಾಗುತ್ತದೆ. ಒಂದು ವೇಳೆ ಮುದ್ದತ್ತು ಮೀರಿದ ಇಂತಹ ಸಾಲಗಳ ಕಂತುಗಳನ್ನು ಸಾಮಾನ್ಯ ಬಡ್ಡಿ ದರದೊಂದಿಗೆ ಇತರ ವೆಚ್ಚಗಳೊಂದಿಗೆ ಮರುಪಾವತಿಸಿದ ಪಕ್ಷದಲ್ಲಿ ನಂತರದ ಚಾಲ್ತಿ ಕಂತುಗಳಿಗೆ ಶೇಕಡಾ 3 ರ ಬಡ್ಡಿಯ ರಿಯಾಯಿತಿಯ ಸೌಲಭ್ಯಗಳು ಮುಂದುವರೆಯುತ್ತವೆ.

4....

11. ಈ ಯೋಜನೆಯ ಅವಧಿಯಲ್ಲಿ ಬಡ್ಡಿ ಸಹಾಯಧನವು ಪೂರ್ಣವಾಗಿ ಮರುಪಾವತಿಯಾಗುವ ಸಾಲ/ಕಂತುಗಳಿಗೆ ಮಾತ್ರ ದೊರೆಯುತ್ತದೆ. ಈ ಸೌಲಭ್ಯವು ಕಂತುಗಳನ್ನು ನಿಗದಿತ ಗಡುವು ದಿನಾಂಕಗಳಿಗಿಂತ ಮುಂಚಿತವಾಗಿ ಮರುಪಾವತಿಸಿದ್ದಲ್ಲಿ ಸಾಲ ಮರುಪಾವತಿಯ ದಿನಾಂಕದವರೆಗೆ ಬಡ್ಡಿ ಸಹಾಯಧನವು ಅನ್ವಯಿಸುತ್ತದೆ. ಯೋಜನೆಯಲ್ಲಿ ರೈತರು ಜೆಷ್ಟೇಷನ್ ಅವಧಿಯಲ್ಲಿ ಪ್ರತಿ ಆರು ತಿಂಗಳಿಗೆ ಮೀರದ ಅವಧಿಯಲ್ಲಿ ರಿಯಾಯಿತಿ ಬಡ್ಡಿ ದರದಲ್ಲಿ ಬಡ್ಡಿಯನ್ನು ಪಾವತಿಸಿದಲ್ಲಿ ಬಡ್ಡಿ ಸಹಾಯಧನವು ಲಭ್ಯವಾಗುತ್ತದೆ. ಈ ರೀತಿ ಬಡ್ಡಿ ಪಾವತಿಸುವಾಗ ಅಸಲಿನ ಮೊತ್ತಕ್ಕೆ ಖರ್ಚು ಹಾಕತಕ್ಕದ್ದಲ್ಲ.

12. ಪತ್ತಿನ ಸಹಕಾರ ಸಂಘಗಳು / ಬ್ಯಾಂಕುಗಳು ಬಡ್ಡಿ ಸಹಾಯಧನವನ್ನು ಸಂಬಂಧಿತ ಸಾಲಗಳ ವಸೂಲಾತಿ ಪ್ರಮಾಣವನ್ನು ಆಧರಿಸಿ, ತ್ರೈಮಾಸಿಕ ಕ್ಲೇಮು ಬಿಲ್ಲುಗಳನ್ನು ಸಿದ್ಧಪಡಿಸಿ ಸಮುಚಿತ ಮಾರ್ಗದಲ್ಲಿ ಸಹಕಾರ ಸಂಘಗಳ ನಿಬಂಧಕರ ಮಂಜೂರಾತಿಗಾಗಿ ಬೇಡಿಕೆ ಸಲ್ಲಿಸತಕ್ಕದ್ದು.

a. ಪತ್ತಿನ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಅಥವಾ ವಾಣಿಜ್ಯ ಬ್ಯಾಂಕಿಗೆ ಸಂಯೋಜಿಸಲ್ಪಟ್ಟಿದ್ದಲ್ಲಿ ಸಂಬಂಧಿಸಿದ ಸಂಘಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಕ್ಲೇಮು ಬಿಲ್ಲುಗಳನ್ನು ತ್ರೈಮಾಸಿಕ ಮುಗಿದ 15 ದಿನದೊಳಗಾಗಿ ತಯಾರಿಸಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲೆಗೆ ಸಂಬಂಧಪಟ್ಟ ಲೆಕ್ಕಪರಿಶೋಧನಾ ಉಪನಿರ್ದೇಶಕರು ಮತ್ತು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಜಂಟಿಯಾಗಿ 15 ದಿನದೊಳಗಾಗಿ ಬಿಲ್ಲುಗಳನ್ನು ಪರಿಶೀಲಿಸಿ, ಜಿಲ್ಲೆಗೆ ಸಂಬಂಧಪಟ್ಟ ಕ್ರೂಢೀಕೃತ ಬಿಲ್ಲುಗಳನ್ನು ದೃಢೀಕರಿಸಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಪ್ರಮಾಣೀಕರಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು. ಮೇಲಿನ ಅಧಿಕಾರಿಗಳು ಶೇ.10 ರಷ್ಟು ಸಂಘಗಳಲ್ಲಿನ ಶೇ.10 ರಷ್ಟು ಸಾಲದ ಖಾತೆಗಳನ್ನು ಪರಿಶೀಲಿಸಿ ಬಿಲ್ಲುಗಳನ್ನು ದೃಢೀಕರಿಸತಕ್ಕದ್ದು. ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಬಿಲ್ಲುಗಳನ್ನು ಕ್ರೂಢೀಕರಿಸತಕ್ಕದ್ದು.

b. ತ್ರೈಮಾಸಿಕ ಮುಗಿದ ಒಂದು ತಿಂಗಳೊಳಗೆ ಪತ್ತಿನ ಸಹಕಾರ ಸಂಘಗಳು ಬಡ್ಡಿ ಸಹಾಯಧನ ಬಿಲ್ಲುಗಳನ್ನು ಸಿದ್ಧಪಡಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸುವ ಹೊಣೆಯನ್ನು ಡಿಸಿಸಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು ಇವರುಗಳು ವಹಿಸತಕ್ಕದ್ದು.

c. ಪಿಕಾರ್ಡ್ ಬ್ಯಾಂಕುಗಳಿಗೆ ಸಂಬಂಧಿಸಿದ ಕ್ಲೇಮು ಬಿಲ್ಲುಗಳನ್ನು ಸಂಬಂಧಿಸಿದ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಯಾರಿಸಿ ಕಸ್ಕಾರ್ಡ್ ಬ್ಯಾಂಕಿನ ಜಿಲ್ಲಾ ವ್ಯವಸ್ಥಾಪಕರಿಗೆ ಸಲ್ಲಿಸತಕ್ಕದ್ದು. ಕಸ್ಕಾರ್ಡ್ ಬ್ಯಾಂಕಿನ ಜಿಲ್ಲಾ ವ್ಯವಸ್ಥಾಪಕರು ಪ್ರಮಾಣೀಕರಿಸಿ ಜಿಲ್ಲೆಗೆ ಸಂಬಂಧಪಟ್ಟ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು ಮತ್ತು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಜಂಟಿಯಾಗಿ ಮೇಲಿನ ರೀತಿಯಲ್ಲಿ ದೃಢೀಕರಿಸಿ, ನಂತರ ಕಸ್ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಪ್ರಮಾಣೀಕರಿಸಿ, ಆನಂತರ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು.

13. ಸಹಕಾರ ಸಂಘಗಳ ನಿಬಂಧಕರು ಸದರಿ ಬಿಲ್ಲುಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಸಹಕಾರ ಸಂಘ / ಸಹಕಾರ ಬ್ಯಾಂಕುಗಳಿಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಮುಖಾಂತರ ಹಣ ಬಿಡುಗಡೆ ಮಾಡತಕ್ಕದ್ದು ಹಾಗೂ ಹಣದ ಉಪಯೋಗದ ಬಗ್ಗೆ ಕಾಲಕಾಲಕ್ಕೆ ಪ್ರಗತಿ ವರದಿಗಳನ್ನು ಅಪೆಕ್ಸ್ ಬ್ಯಾಂಕಿನಿಂದ ನಿಗಧಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5....

14. ಪ್ರಸ್ತುತ ಆರ್ಥಿಕ ವರ್ಷ **01-04-2020** ರಿಂದ **31-03-2021** ರವರೆಗೆ ಅಪೆಕ್ಸ್ ಬ್ಯಾಂಕ್ ಡಿಸಿಸಿ ಬ್ಯಾಂಕುಗಳಿಗೆ ರೂ.800 ಕೋಟಿಗಳ ಗುರಿಯನ್ನು ನಿಗದಿಪಡಿಸಿದ್ದು ಅದರಂತೆ ಸಾಲ ವಿತರಿಸಲು ಕ್ರಮ ಜರುಗಿಸತಕ್ಕದ್ದು. ಹೀಗೆ ನಿಗದಿಪಡಿಸುವಾಗ ಜಿಲ್ಲೆಯಲ್ಲಿನ ಹೊಸ ಸದಸ್ಯರಿಗೆ ಮತ್ತು ಪ.ಜಾತಿ/ಪ.ಪಂಗಡದ ಸದಸ್ಯರಿಗೆ ಜಿಲ್ಲೆಯಲ್ಲಿ ಈ ವರ್ಗದ ರೈತರ ಪ್ರಮಾಣಕ್ಕೆ ಅನುಗುಣವಾಗಿ (ಕನಿಷ್ಠ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣ) ಪ್ರತ್ಯೇಕವಾಗಿ ಗುರಿ ನಿಗದಿಪಡಿಸತಕ್ಕದ್ದು. ಒಟ್ಟಾರೆ ವಿತರಿಸಿದ ಸಾಲದ ಪೈಕಿ ಶೇಕಡಾ24.10 ರಷ್ಟು ಸಾಲವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಸಾಲ ನೀಡುವುದು ಕಡ್ಡಾಯವಾಗಿರುತ್ತದೆ. ಕಸ್ಕಾರ್ಡ್ ಬ್ಯಾಂಕ್ ಪಿಕಾರ್ಡ್ ಬ್ಯಾಂಕುಗಳಿಗೂ ಸಹ ಇದೇ ರೀತಿಯಲ್ಲಿ ನಬಾರ್ಡ್ ಪುನರ್ಧನದ ಮಿತಿ ಆಧಾರದಲ್ಲಿ ಗುರಿಯನ್ನು ನಿಗದಿಪಡಿಸತಕ್ಕದ್ದು.

15. ಸಹಕಾರ ಸಂಘಗಳ ನಿಬಂಧಕರು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

16. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಾಲಕಾಲಕ್ಕೆ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡಿದ ಸೂಚನೆಗಳನ್ನು ಸಹಕಾರ ಸಂಸ್ಥೆಗಳು ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 162 ವೆಚ್ಚ-2/2020 ದಿನಾಂಕ: 19.09.2020 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ.ಎಂ ಆಶಾ)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 100 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು :**

1. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ,
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
7. ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬಸವನಗುಡಿ, ಬೆಂ-04.
8. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
9. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಉತ್ತುಂಗ, ನಂ.1, ಪಂಪಾಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂ-18.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು-18.

11. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
12. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
13. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು.

} ಸಹಕಾರ ಸಂಘಗಳ ನಿಬಂಧಕರ ಮೂಲಕ

14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು.
15. ಆಂತರಿಕ ಆರ್ಥಿಕ ಸಲಹೆಗಾರರು, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ.
16. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
17. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ
18. ರಾಜ್ಯ ಹೂಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
19. ರಾಜ್ಯ ಖಜಾನಾಧಿಕಾರಿ, ಜೆ.ಸಿ ರಸ್ತೆ, ಬೆಂಗಳೂರು
20. ಶಾಖಾ ರಕ್ಷಾ ಕಡತ:ಹೆಚ್ಚುವರಿ ಪ್ರತಿ

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52 ದೂ.22256146**

ಸಂಖ್ಯೆ ಸಿಆರ್‌ಡಿ/ಸಿಎಬಿ-1/ 2/2020-21 ದಿನಾಂಕ 15 -10-2020

**'ಸುತ್ತೋಲೆ'**

**ವಿಷಯ :-** 2020-21 ನೇ ಸಾಲಿಗೆ ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ರಿಯಾಯಿತಿ ಬಡ್ಡಿದರ ಅನ್ವಯವಾಗುವಂತೆ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ವಿತರಿಸುವ ಬಗ್ಗೆ

**ಉಲ್ಲೇಖ:-**
1. ಸರ್ಕಾರದ ಆದೇಶ ಸಂಖ್ಯೆ ಸಿಇ 272 ಸಿಎಲ್ಎಸ್ 2020, ಬೆಂಗಳೂರು, ದಿ.7.10.2020
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿಆರ್‌ಡಿ/ಸಿಎಬಿ-1/3/2020-21 ದಿನಾಂಕ: 22-5-2020
3. ದಿ.25-8-2020 ರಂದು ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು
4. ಈ ಕಛೇರಿ ಸುಸತ್ತೋಲೆ ಸಂಖ್ಯೆ ಸಿಆರ್‌ಡಿ/ ಸಿಎಬಿ-1/2/2019-20 ದಿ.9-10-2020

##

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, 2020-21 ನೇ ಸಾಲಿಗೆ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ರಿಯಾಯಿತಿ ಬಡ್ಡಿದರ ಅನ್ವಯವಾಗುವಂತೆ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ವಿತರಿಸುವ ಬಗ್ಗೆ ಉಲ್ಲೇಖ 1 ರಲ್ಲಿ ಸರ್ಕಾರ ಆದೇಶ ಹೊರಡಿಸಿದ್ದು, ಅದರ ಪ್ರತಿಯನ್ನು ಈ ಪತ್ರಕ್ಕೆ ಅನುಬಂಧ-1 ರಲ್ಲಿ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಸರ್ಕಾರದ ಆದೇಶದನ್ವಯ ಎಲ್ಲಾ ಅವಶ್ಯಕ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಲು ನಿರ್ದೇಶಿಸಲಾಗಿದೆ. ಸರ್ಕಾರದ ಆದೇಶವನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು ಹಾಗೂ ಎಲ್ಲ ವರ್ಗದ ಸದಸ್ಯರಿಗೆ ಮುಖ್ಯವಾಗಿ ಪ.ಜಾತಿ/ಪಂಗಡದ ರೈತ ಸದಸ್ಯರಿಗೆ ಸಾಲದ ಅರ್ಜಿಗಳನ್ನು ಸುಲಭವಾಗಿ ದೊರೆಯುವಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಸಾಲದ ಅರ್ಜಿಗಳನ್ನು ಸ್ವೀಕರಿಸಿದ ಮತ್ತು ಸಾಲ ಮಂಜೂರಾದ ವಿವರಗಳನ್ನು ನಮೂದಿಸಲು ಪ್ರತ್ಯೇಕ ರಿಜಿಸ್ಟರ್‌ನ್ನು ಸಂಘಗಳ/ಬ್ಯಾಂಕುಗಳ ಮಟ್ಟದಲ್ಲಿ ನಿರ್ವಹಿಸಿತಕ್ಕದ್ದು.

ಉಲ್ಲೇಖ 2 ರಲ್ಲಿ ಈಗಾಗಲೇ ಡಿಸಿಸಿ ಬ್ಯಾಂಕುಗಳು ನೀಡಿದ ಮಾಹಿತಿ ಆಧರಿಸಿ 0.30 ಲಕ್ಷ ರೈತರಿಗೆ ರೂ.800 ಕೋಟಿಗಳ ಸಾಲ ವಿತರಿಸಲು ಜಿಲ್ಲಾವಾರು ಗುರಿ ನಿಗದಿಪಡಿಸಿದ್ದು, ಉಲ್ಲೇಖ 3 ರ ಸಭೆಯಲ್ಲಿ ಸೂಚಿಸಿದಂತೆ ವಿಧಾನ ಸಭಾ ಕ್ಷೇತ್ರಗಳಿಗೆ ಯಾವುದೇ ತಾರತಮ್ಯ ಮಾಡದೇ ಪ್ರತೀ ವಿಧಾನ ಸಭಾ ಕ್ಷೇತ್ರ ಹಾಗೂ ಸಂಘಗಳಿಗೆ ಸಾಲ ವಿತರಿಸಲು ಕೂಡಲೇ ಗುರಿಯನ್ನು ನಿಗದಿಪಡಿಸಿ ಅದರನ್ವಯ ಸಾಲ ವಿತರಣೆಯನ್ನು ಕೈಗೊಳ್ಳಲು ಸೂಚಿಸಲಾಗಿದೆ.

ಪ್ರತೀ ಡಿಸಿಸಿ ಬ್ಯಾಂಕ್ ಒಟ್ಟಾರೆ ಸದಸ್ಯರು, ಹೊಸ ಸದಸ್ಯರು ಮತ್ತು ಪ.ಜಾತಿ/ಪ.ಪಂಗಡದ ಸದಸ್ಯರಿಗೆ ಮಾಹೆವಾರು ಗುರಿ ನಿಗದಿಪಡಿಸಿಕೊಂಡು ಅಪೆಕ್ಸ್ ಬ್ಯಾಂಕಿನ ಮೂಲಕ ದಿ.20-10-2020 ರೊಳಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಸರ್ಕಾರದ ಆದೇಶದಲ್ಲಿ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಹಕಾರ ಸಂಸ್ಥೆಗಳು ಕೆಳ ಹಂತದ ಸಂಸ್ಥೆಗಳಿಗೆ ಆಕರಣೆ ಮಾಡಬೇಕಾದ ಬಡ್ಡಿ ದರ ಮತ್ತು ಸರ್ಕಾರ ಪಾವತಿಸುವ ಬಡ್ಡಿ ಸಹಾಯಧನದ ದರವನ್ನು ಪ್ರಾರಂಭದಲ್ಲಿಯೇ ನಿಗದಿಪಡಿಸಲಾಗಿದ್ದು, ಅದರನ್ವಯ ಬಡ್ಡಿ ಆಕರಣೆ ಮಾಡತಕ್ಕದ್ದು. ಇದನ್ನು ಪಾಲಿಸದೇ ಇದ್ದಲ್ಲಿ ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಳ ಹಂತದ ಸಂಸ್ಥೆಗಳಿಗಾಗುವ ನಷ್ಟಕ್ಕೆ ಜವಾಬ್ದಾರರಾಗಿರುತ್ತಾರೆ. ನಬಾರ್ಡ್ ನಿಂದ ಆದ್ಯತಾ ಕೃಷಿ ಮತ್ತು ಕೃಷಿ ಸಂಬಂದಿತ ದೀರ್ಘಾವಧಿ ಸಾಲಗಳಿಗೆ ಕಡಿಮೆ ದರದಲ್ಲಿ ದೊರೆಯುವ ಪುನರ್ಧನ ಸೌಲಭ್ಯವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಸಂಬಂಧಿಸಿದ ಎಲ್ಲಾ ಬ್ಯಾಂಕುಗಳಿಗೆ ಸೂಚಿಸಲಾಗಿದೆ. ಅಪೆಕ್ಸ್ ಬ್ಯಾಂಕ್ ನಬಾರ್ಡ್ ಬಡ್ಡಿ ದರಗಳನ್ನು ಪರಿಷ್ಕರಿಸಿದಲ್ಲಿ ಅದರ ವಿವರವನ್ನು ಈ ಕಛೇರಿಗೆ ಒದಗಿಸಲು ಸೂಚಿಸಲಾಗಿದೆ. ಇದರ ಆಧಾರದ ಮೇಲೆ ಸರ್ಕಾರದ ಬಡ್ಡಿ ಸಹಾಯಧನ ದರವನ್ನು ಪುನರ್ ನಿಗದಿಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.

2020-21 ರಲ್ಲಿ ಸಾಲ ವಿತರಿಸಿ ವಸೂಲಾಗುವ ಕಂತುಗಳಿಗೆ ಸಂಬಂಧಿಸಿದ ಬಡ್ಡಿ ಸಹಾಯಧನವನ್ನು ಸರ್ಕಾರದಿಂದ ಕ್ಲೇಮು ಮಾಡಲು ಉಲ್ಲೇಖ 4 ರಲ್ಲಿ 2019-20 ನೇ ಸಾಲಿಗೆ ನಿಗದಿಪಡಿಸಿದ ಬಡ್ಡಿ ಸಹಾಯಧನದ ಕ್ಲೇಮು ನಮೂನೆಗಳಲ್ಲಿಯೇ ಕ್ಲೇಂ ಮಾಡಲು ಸೂಚಿಸಲಾಗಿದೆ.

ಸರ್ಕಾರದ ಆದೇಶದಲ್ಲಿ ಈ ಯೋಜನೆಯು ಒಂದು ಕುಟುಂಬಕ್ಕೆ ಗರಿಷ್ಟ ರೂ.10.00 ಲಕ್ಷಗಳ ವರೆಗಿನ ಸಾಲಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಒಂದು ಕುಟುಂಬದಲ್ಲಿನ ಎಲ್ಲಾ ಸದಸ್ಯರಿಗೆ ಒಟ್ಟಾರೆ ಸೇರಿ ಗರಿಷ್ಟ 10 ವರ್ಷಗಳ ಸಾಲ ಮರುಪಾವತಿ ಅವಧಿಗೆ ಗರಿಷ್ಟ ರೂ.4.00 ಲಕ್ಷಗಳ ವರೆಗಿನ ಬಡ್ಡಿ ಸಹಾಯಧನ ದೊರೆಯುವುದು ಎಂದು ತಿಳಿಸಿರುತ್ತದೆ. ಸದರಿ ಷರತ್ತನ್ನು ಪಾಲಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

ಸಹಕಾರ ಸಂಸ್ಥೆಗಳು ರೈತರಿಂದ ಭಧ್ರತೆಯ ದಾಖಲೆಗಳು, ಯೋಜನಾ ವರದಿ ಜೊತೆಯಲ್ಲಿ ಆದಾರ್, ಪಡಿತರ ಚೀಟಿ ಮತ್ತು ಆರ್‌ಟಿಸಿ ಗಳೊಂದಿಗೆ, ಇದಕ್ಕೆ ಲಗತ್ತಿಸಿದ ನಮೂನೆಯಲ್ಲಿನ ಮಾದರಿಯಲ್ಲಿ ಸಾಲದ ಅರ್ಜಿ ಮತ್ತು ಸ್ವಯಂ ದೃಡೀಕರಣವನ್ನು ಪಡೆಯತಕ್ಕದ್ದು. ಸಾಲ ವಿತರಿಸಿದ ಮಾಹಿತಿಯನ್ನು ಮತ್ತು ಸ್ವಯಂ ದೃಡೀಕರಣದ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು/ಕ್ಲೇಮು ಬಿಲ್ಲು ಸಲ್ಲಿಸಲು ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸಲಾಗುವುದು.

2020-21 ರಲ್ಲಿ ಸಾಲ ಪಡೆಯಲು ಇಚ್ಚಿಸುವ ರೈತನು ಹೊಂದಿದ (ದಿ.1-4-2020 ಕ್ಕೆ ಚಾಲ್ತಿಯಲ್ಲಿರುವ) ಪಡಿತರ ಚೀಟಿಯಲ್ಲಿನ ಸದಸ್ಯರು ದಿ.1-4-2004 ರಿಂದ ಸಾಲ ಪಡೆದು ಈಗಾಗಲೇ ರೂ.4 ಲಕ್ಷ ಬಡ್ಡಿ ಸಹಾಯಧನ ಪಡೆದಿದ್ದರೆ ಅಂತಹ ಕುಟುಂಬದ ಯಾವುದೇ ಸದಸ್ಯನಿಗೆ ರಿಯಾಯಿತಿ ಬಡ್ಡಿ ದರದ ಸಾಲ ಅನ್ವಯವಾಗುವುದಿಲ್ಲ. ಒಂದು ವೇಳೆ ಬಡ್ಡಿ ಮನ್ನಾ ಯೋಜನೆಯಲ್ಲಿ ಲಾಭ ಪಡೆದಿದ್ದಲ್ಲಿ ಸುಸ್ತಿಯಾದ ಕಂತುಗಳ ಗಡುವು ದಿನಾಂಕದ ವರೆಗಿನ ಬಡ್ಡಿಯನ್ನು ಬಡ್ಡಿ ಸಹಾಯಧನ ಎಂದೇ ಪರಿಗಣಿಸತಕ್ಕದ್ದು. ರೈತರ ಖಾತೆಗಳಿಗೆ ಇದುವರೆಗೆ ಸರ್ಕಾರ ನೀಡಿದ ಬಡ್ಡಿ ಸಹಾಯಧನವನ್ನು ನಿಖರವಾಗಿ ಸಹಕಾರ ಸಂಘಗಳು ಜಮಾ ನೀಡಿರತಕ್ಕದ್ದು. ಪ್ರತೀ ಕಂತಿಗೆ ಸಂಬಂಧಿಸಿದ ಬಡ್ಡಿ ಸಹಾಯಧನದ ವಿವರವನ್ನು ಸಾಲದ ಖಾತೆಯಲ್ಲಿ ಪ್ರಾರಂಭದಲ್ಲಿಯೇ ನಮೂದಿಸತಕ್ಕದ್ದು. ಒಂದು ವೇಳೆ ರೂ.4 ಲಕ್ಷಕ್ಕಿಂತ ಕಡಿಮೆ ಬಡ್ಡಿ ಸಹಾಯಧನ ಲಾಭ ಪಡೆದಿದ್ದಲ್ಲಿ ರೂ.4 ಲಕ್ಷಗಳಿಗೆ ಉಳಿದ ಬಡ್ಡಿ ಸಹಾಯಧನದ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಲಭ್ಯವಾಗುತ್ತದೆ. ಈ ಬಗ್ಗೆ ರೈತರಿಗೆ ನಿಖರವಾಗಿ ಸಾಲ ಮಂಜೂರು ಆದೇಶದಲ್ಲಿಯೇ ತಿಳಿಸತಕ್ಕದ್ದು.

2020-21 ರಿಂದ ಮಂಜೂರು ನೀಡುವ ಸಾಲಗಳಿಗೆ ಗರಿಷ್ಟ 10 ವರ್ಷಗಳ ಅವಧಿಗೆ (ಜಸ್ಟೇಷನ್ ಅವಧಿ ಮತ್ತು ಸುಸ್ತಿ ಅವಧಿ ಒಳಗೊಂಡಂತೆ) ಅಥವಾ ಮೇಲಿನಂತೆ ರೂ.4 ಲಕ್ಷಗಳ ಬಡ್ಡಿ ಸಹಾಯಧನ ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಮಾತ್ರ ಬಡ್ಡಿ ಸಹಾಯಧನ ಲಭಿಸುತ್ತದೆ. ಉಳಿದ ಅವಧಿಗೆ ಸಾಮಾನ್ಯ ಬಡ್ಡಿ ದರ ಅನ್ವಯವಾಗುತ್ತದೆ.

ಕುಟುಂಬದ ಸದಸ್ಯರು ಒಟ್ಟಾರೆ ಎಷ್ಟೇ ಸಾಲ ಪಡೆದಿದ್ದರೂ 2020-21 ರಲ್ಲಿ ಯಾವ ಸದಸ್ಯನ ಸಾಲದ ಗಡುವು ಮೊದಲು ಬರುತ್ತದೋ ಅಂತಹ ಸದಸ್ಯರಿಗೆ ಮೊದಲು ಬಡ್ಡಿ ಸಹಾಯದನ ಲಭಿಸುತ್ತದೆ. ನಂತರದ ಸದಸ್ಯರಿಗೆ ಉಳಿದ ಬಡ್ಡಿ ಸಹಾಯದನ ಲಭಿಸುತ್ತದೆ. ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚಿನ ಸದಸ್ಯರು ಒಂದೇ ಜಮೀನಿನಲ್ಲಿ ಒಂದೆ ಬಗೆಯ ಯೋಜನೆ ಕೈಗೊಳ್ಳಲು ಉದ್ದೇಶಿಸಿದಲ್ಲಿ ಜಂಟಿಯಾಗಿ ಸಾಲ ಮಂಜೂರು ನೀಡುವ ಪದ್ದತಿಯನ್ನು ಅಳವಡಿಸಿಕೊಳ್ಳಬಹುದಾಗಿದೆ.

2 ಕುಟುಂಬದ ಸದಸ್ಯರು ಒಂದೇ ರೇಷನ್ ಕಾರ್ಡ್ ನಲ್ಲಿದ್ದರೆ ಅವರು ಹೊಸ ರೇಷನ್ ಕಾರ್ಡ್ ಪಡೆಯುವ ವರೆಗೆ ಒಂದೇ ಕುಟುಂಬ ಎಂದು ಪರಿಗಣಿಸತಕ್ಕದ್ದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಿಲ್ಲುಗಳಿಗೆ ಸಂಬಂಧಿಸಿದಂತೆ ಈ ಕಛೇರಿಯಿಂದ ಬಿಡುಗಡೆ ಮಾಡುವ ಬಡ್ಡಿ ಸಹಾಯದನದ ಮೊತ್ತಕ್ಕೆ ರೈತವಾರು ಮಾಹಿತಿಯನ್ನು ಸಮಾಜ ಕಲ್ಯಾಣ ಇಲಾಖೆಯ ವೆಬ್ ಸೈಟ್ sw.kar.nic.in ನಲ್ಲಿ ಪ್ರತೀ ತಾಲ್ಲೂಕಿನ ಸಹಕಾರ ಅಭಿವೃದ್ದಿ ಅಧಿಕಾರಿಗಳಿಗೆ ನೀಡಿದ ಲಾಗ್ ಇನ್ ಬಳಸಿ ಮಾಹಿತಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಇದಕ್ಕಾಗಿ ರೈತರಿಂದ ಜಾತಿಗೆ ಸಂಬಂಧಿಸಿದ ಆರ್‌ಡಿ ಸಂಖ್ಯೆಯನ್ನು ಸಾಲ ವಿತರಿಸುವ ಸಂಧರ್ಭದಲ್ಲಿಯೇ ಸಾಲದ ಅರ್ಜಿಯೊಂದಿಗೆ ಪಡೆಯಲು ಒತ್ತು ನೀಡಬೇಕು. ಬ್ಯಾಂಕುಗಳು ಸಂಘವಾರು ಹೊಂದಾಣಿಕೆ ಮಾಡಿಕೊಂಡ ಮೊತ್ತಕ್ಕೆ ಸಂಬಂಧಿಸಿದ ಸಂಘದ ಪ.ಜಾ ಮತ್ತು ಪ.ಪಂಗಡದ ಮಾಹಿತಿಯನ್ನು ಪಡೆದು ಆನ್ ಲೈನ್ ಮೂಲಕ ಸಹಕಾರ ಸಂಘಗಳ ಸಹಕಾರ ಅಭಿವೃದ್ಧಿ ಅಧಿಕಾರಿಗಳ ಮೂಲಕ ಎಂಟ್ರಿ ಮಾಡಲು ಡಿಸಿಸಿ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರು ಕ್ರಮ ವಹಿಸಬೇಕು.

ಸರ್ಕಾರದ ಆದೇಶದ ಷರತ್ತುಗಳು ಮತ್ತು ಮೇಲಿನ ನಿರ್ದೇಶನಗಳನ್ನು ಪಾಲಿಸಿ ಯೋಜನೆಯನ್ನು ಸರಿಯಾದ ರೀತಿಯಲ್ಲಿ ಜಾರಿಗೊಳಿಸಲು ಎಲ್ಲಾ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

(ಎಸ್. ಜಿಯಾಉಲ್ಲಾ)
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

1. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
   ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ.,
2. ವ್ಯವಸ್ಥಾಪಕ ನಿರ್ದೇಶಕರು,
   ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ, ಬೆಂಗಳೂರು
3. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
4. ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
5. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು,
6. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕಿನ ಶಾಖೆಯಲ್ಲಿ/ ಪಿಕಾರ್ಡ್ ಬ್ಯಾಂಕ್ ಗಳಲ್ಲಿ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ ಪಡೆಯಲು ಅರ್ಜಿ ಮತ್ತು ಆಧಾರ್ ಸಮ್ಮತಿ**

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕ್/ಪಿಕಾರ್ಡ್ ಬ್ಯಾಂಕ್ ____, ತಾಲ್ಲೂಕು____, ಜಿಲ್ಲೆ ____**

| | | |
|---|---|---|
| 1. | ರೈತನ ಹೆಸರು | |
| 2. | ತಂದೆ/ತಾಯಿ/ಗಂಡನ ಹೆಸರು | |
| 3. | ಆಧಾರ ನಂಬರ್ | |
| 4. | ಆಧಾರ್ ಕಾರ್ಡ್‌ನಲ್ಲಿದಂತೆ ಹೆಸರು | |
| 5. | ಮೊಬೈಲ್ ನಂಬರ್ | 9 1 |
| 6. | ಜಾತಿ(ಟಿಕ್ ಮಾಡುವುದು) | ಪರಿಶಿಷ್ಟಜಾತಿ/ ಪರಿಶಿಷ್ಟವರ್ಗ /ಇತರೆ ಹಿಂದುಳಿದ ವರ್ಗಗಳು/ ಅಲ್ಪಸಂಖ್ಯಾತರು /ಸಾಮಾನ್ಯ |
| 7. | ಜಾತಿಗೆ ಸಂಬಂಧಿಸಿದ ಆರ್ ಡಿ ಸಂಖ್ಯೆ | |
| 8. | ವಯಸ್ಸು | |
| 9. | ರೈತನ ವರ್ಗೀಕರಣ | ದೊಡ್ಡ / ಮಧ್ಯಮ/ಸಣ್ಣ/ಅತೀ ಸಣ್ಣ |
| 10. | ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಉಳಿತಾಯ ಖಾತೆ ನಂಬರ್ | |
| 11. | (ಐಎಫ್ಎಸ್ ಸಿಕೋಡ್) IFSC Code | |
| 12. | ಸಂಘದಲ್ಲಿ ಶೇರು ಹೊಂದಿದ್ದರೆ ಅದರ ಸಂಖ್ಯೆ | |
| 13. | ಪಡಿತರ ಚೀಟಿ ನಂಬರ್ (ಚಾಲ್ತಿಯಲ್ಲಿರುವ) | |

14. ಪಡಿತರ ಚೀಟಿಯಂತೆ ಕುಟುಂಬದ ಸದಸ್ಯರು(ಅರ್ಜಿದಾರ ಒಳಗೊಂಡಂತೆ)

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಕುಟುಂಬದ ಮುಖ್ಯಸ್ಥರೊಂದಿಗೆ ಸಂಬಂಧ | ವಯಸ್ಸು | ಲಿಂಗ | ಉದ್ಯೋಗ/ವೃತ್ತಿ | ವಾರ್ಷಿಕ ಆದಾಯ(ರೂ) |
|---|---|---|---|---|---|---|
| ಎ | | | | | | |
| ಬಿ | | | | | | |
| ಸಿ | | | | | | |
| ಡಿ | | | | | | |
| ಇ | | | | | | |

15. ದಿ.1-4-20204 ರ ನಂತರದಿಂದ ತಹಲ್ ವರೆಗೆ ಕುಟುಂಬದ ಸದಸ್ಯರುಸಹಕಾರ ಸಂಘ/ಬ್ಯಾಂಕುಗಳಲ್ಲಿ ಪಡೆದ ಮಧ್ಯಮಾವಧಿ ಮತ್ತು ಧೀರ್ಘಾವದಿ ಕೃಷಿ ಸಾಲದ ವಿವರ

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಸಾಲ ಪಡೆದ ಸಂಘ/ಬ್ಯಾಂಕ್ ನ ಹೆಸರು | ಉದ್ದೇಶ | ಸಾಲ ಮಂಜೂರಾದ ದಿನಾಂಕ | ಸಾಲ ಮಂಜೂರಾದ ಮೊತ್ತ | ಅರ್ಜಿ ದಿನಾಂಕಕ್ಕೆ ಬಾಕಿ | ಈ ಪೈಕಿ ಸುಸ್ತಿ ಬಾಕಿ |
|---|---|---|---|---|---|---|---|
| ಎ | | | | | | | |
| ಬಿ | | | | | | | |
| ಸಿ | | | | | | | |
| ಡಿ | | | | | | | |
| ಇ | | | | | | | |

16. ಇತರೇ ಬ್ಯಾಂಕುಗಳಲ್ಲಿ (ವಾಣಿಜ್ಯ ಮತ್ತು ಗ್ರಾಮೀಣ) ಕುಟುಂಬದ ಸದಸ್ಯರು ಹೊಂದಿರುವ ಸಾಲದ ವಿವರ ಮತ್ತು ಸಹಕಾರ ಸಂಘಗಳಲ್ಲಿ ಕೃಷಿ ಯೇತರ ಉದ್ದೇಶಗಳಿಗೆ ಹೊಂದಿರುವ ಸಾಲದ ವಿವರ

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಸಾಲ ಪಡೆದ ಬ್ಯಾಂಕ್ ನ ಹೆಸರು | ಉದ್ದೇಶ | ಸಾಲ ಮಂಜೂರಾದ ದಿನಾಂಕ | ಸಾಲ ಮಂಜೂರಾದ ಮೊತ್ತ | ಅರ್ಜಿ ದಿನಾಂಕಕ್ಕೆ ಬಾಕಿ | ಈ ಪೈಕಿ ಸುಸ್ತಿ ಬಾಕಿ |
|---|---|---|---|---|---|---|---|
| ಎ | | | | | | | |
| ಬಿ | | | | | | | |

17. ವಿಳಾಸ (ಆಧಾರ್ ಕಾರ್ಡ್ ನಲ್ಲಿರುವಂತೆ)

| | | | |
|---|---|---|---|
| ಎ. ಜಿಲ್ಲೆ | | ಬಿ.ತಾಲ್ಲೂಕು | |
| ಸಿ. ಹೋಬಳಿ | | ಡಿ. ಗ್ರಾಮ | |

18. ರೈತರ ಜಮೀನು ವಿವರಗಳು

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಹೋಬಳಿ | ಗ್ರಾಮ | ಸರ್ವೆ ನಂಬರ್ | ಅಕ್ಷರ ಭಾಗ | ಹಿಸ್ಸಾನಂ. | ಎಕರೆ | ಗುಂಟೆ |
|---|---|---|---|---|---|---|---|---|---|
| ಎ | | | | | | | | | |
| ಬಿ | | | | | | | | | |
| ಸಿ | | | | | | | | | |

19. ರೈತನ ಸ್ಥಿರ /ಚರಾಸ್ತಿಗಳ ವಿವರ

| ಸ್ಥಿರಾಸ್ತಿಗಳ ವಿಧ | ವಿಸ್ತೀರ್ಣ | ಈಗಿನ ಮೌಲ್ಯ | ಚರಾಸ್ತಿಗಳ ವಿಧ | ವಿವರ | ಸಂಖ್ಯೆ | ಈಗಿನ ಮೌಲ್ಯ |
|---|---|---|---|---|---|---|
| ಕೃಷಿ ಭೂಮಿ | | | ಟ್ರಾಕ್ಟರ್/ಪವರ್ ಟಿಲ್ಲರ್ | | | |
| ಕೃಷಿಯೇತರ ಭೂಮಿ | | | ಯಂತ್ರೋಪಕರಣಗಳು | | | |
| ಕಟ್ಟಡ | | | ಇತರೇ ವಾಹನಗಳು | | | |
| | | | ಜಾನುವಾರುಗಳು | | | |
| ಒಟ್ಟು | | | | | | |

20. ರೈತನ ಆದಾಯದ ಮೂಲ (ವಾರ್ಷಿಕ)

| ಆದಾಯ ಮೂಲ | ಆದಾಯ |
|---|---|
| ಕೃಷಿ | |
| ನೌಕರಿ | |
| ಕೃಷಿಯೇತರ ಸ್ವಂತ ಉದ್ಯೋಗ | |
| ಒಟ್ಟು | |

21. ಅವಶ್ಯವಿರುವ ಸಾಲದ ಮೊತ್ತ

| | |
|---|---|
| ಯೋಜನಾ ವೆಚ್ಚ | |
| ರೈತನ ವಂತಿಕೆ | |
| ಅವಶ್ಯವಿರುವ ಸಾಲದ ಮೊತ್ತ | |

22. ಯೋಜನೆ ವಿವರ

| ಕ್ರ. ಸಂ ಖ್ಯೆ | ಸಾಲದ ಉದ್ದೇಶ (ಕಾಮ ಗಾರಿ) | ಅಭಿವೃದ್ಧಿ ಪಡಿಸುವ ಜಮೀನಿನ ಸರ್ವೆ ನಂ | ವಿಸ್ತೀರ್ಣ | ಸ್ಥಳ | ಬೆಳೆಯು ವ ಬೆಳೆ | ಮೂಲ ಸೌಕರ್ಯ/ ಕಟ್ಟಡದ ವಿಸ್ತೀರ್ಣ | ಕರೀದಿಸು ವ ಯಂತ್ರೋ ಪಕರಣಗ ಳ ವಿವರ | ಜಾನುವಾ ರು ವಿಧ ( | ಜಾನುವಾ ರು/ರಾ ಸುಗಳ ಸಂಖ್ಯೆ |
|---|---|---|---|---|---|---|---|---|---|
| | | | | | | | | | |
| | | | | | | | | | |

23. ಒದಗಿಸುವ ಭದ್ರತೆ ವಿವರ

| ಭದ್ರತೆ ವಿಧ | ಮೌಲ್ಯ |
|---|---|
| ಮೂಲ ಭದ್ರತೆ | |
| ಕೊಲ್ಯಾಟರಲ್ ಭದ್ರತೆ | |
| ಒಟ್ಟು | |

24. ಜಾಮೀನುದಾರರ ವಿವರ

| ಕ್ರ.ಸ | ಜಾಮೀನುದಾರರ ಹೆಸರು | ಶೇರು ಸಂಖ್ಯೆ | ವಿಳಾಸ | ದೂರವಾಣಿ ಸಂಖ್ಯೆ | ಉದ್ಯೋಗ | ವಾರ್ಷಿಕ ಆದಾಯ | ಸ್ಥಿರಾಸ್ತಿ ವಿವರ | ಮೌಲ್ಯ |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |

25. ಆಧಾರ್ ಸಮ್ಮತಿ

ನಾನು, ಈ ಮೂಲಕ, ಕೃಷಿ ಸಾಲ ಹಾಗೂ ಸಹಕಾರ ಇಲಾಖೆಯ ಇತರೆ ಸೇವೆಗಳನ್ನು ಬಳಸಿಕೊಳ್ಳುವುದಕ್ಕಾಗಿ ನನ್ನ ಆಧಾರ ನಂಬರ್ ಮತ್ತು ವಿವರಗಳನ್ನು ಒದಗಿಸಲು ಮತ್ತು ಸದರಿ ಮಾಹಿತಿಯನ್ನು ಸಹಕಾರ ಇಲಾಖೆಯಲ್ಲಿ ಸಂಗ್ರಹಿಸಿಡಲು ಭಾರತ ಸರ್ಕಾರದ ವಿಶಿಷ್ಟ ಗುರುತು ಪ್ರಾಧಿಕಾರದ ಮಾರ್ಗಸೂಚಿಗಳನ್ವಯ ಸಮ್ಮತಿಸಿರುತ್ತೇನೆ. ನನಗೆ ಆಧಾರ ನಂಬರ್ ನೀಡದಿರುವ ಪಕ್ಷದಲ್ಲಿ ಪರ್ಯಾಯವಾದ ಗುರುತಿನ ದಾಖಲೆಯನ್ನು ಒದಗಿಸುವ ಹಕ್ಕನ್ನು ಹೊಂದಿರುತ್ತೇನೆಂದು ನಾನು ತಿಳಿದಿರುತ್ತೇನೆ.

26. **ಸಹಕಾರ ಸಂಘ/ಡಿಸಿಸಿ ಬ್ಯಾಂಕು ವಿಧಿಸುವ ಈ ಕೆಳಕಂಡ ಷರತ್ತುಗಳಿಗೆ ನನ್ನ ಒಪ್ಪಿಗೆಯನ್ನು ಸೂಚಿಸಿರುತ್ತೇನೆ.**

1. ನಾನು ಸಾಲವನ್ನು ಸಂಘ/ಬ್ಯಾಂಕ್ ನಿಗದಿಪಡಿಸಿದ ಗಡುವಿನ ದಿನಾಕದೊಳಗೆ ಸಾಲವನ್ನು ಪಾವತಿಸಲು ಬದ್ಧನಾಗಿರುತ್ತೇನೆ.
2. ಕೇಂದ್ರ/ರಾಜ್ಯ ಸರ್ಕಾರ/ ಸಂಘವು ವಿಧಿಸುವ ಬಡ್ಡಿ ದರದಲ್ಲಿ ಅಸಲನ್ನು ಮರು ಪಾವತಿಸಲು ಬದ್ಧನಾಗಿರುತ್ತೇನೆ.
3. ನಾನು ಗಡುವಿನ ದಿನಾಂಕದೊಳಗೆ ಸಾಲವನ್ನು ಮರುಪಾವತಿಸದೇ ಇದ್ದರೆ ನನ್ನ ಉಳಿತಾಯ ಖಾತೆಗೆ/ಸಾಲದ ಖಾತೆಗೆ ಜಮಾ ಆಗುವ ಬೆಳೆ ವಿಮೆ ಪರಿಹಾರವನ್ನು ಸಾಲಕ್ಕೆ ಜಮಾ ಪಡೆಯಲು ಒಪ್ಪಿಗೆ ಸೂಚಿಸಿರುತ್ತೇನೆ.
4. ಡಿಸಿಸಿ ಬ್ಯಾಂಕಿನಲ್ಲಿ ನನ್ನ ಉಳಿತಾಯ ಖಾತೆಯನ್ನು ತೆರೆದು ಸಾಲದ ಮೊತ್ತವನ್ನು ಉಳಿತಾಯ ಖಾತೆಗೆ ಜಮಾ ನೀಡಲು ನನ್ನ ಒಪ್ಪಿಗೆ ಇರುತ್ತದೆ.

27. ಘೋಷಣೆ

ಈ ಮೇಲೆ ನಾನು ಒದಗಿಸಿರುವ ವಿವರಗಳು ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.ರಾಜ್ಯ/ಕೇಂದ್ರ ಸರ್ಕಾರದ ಬಡ್ಡಿ ಸಹಾಯಧನ ಸೌಕರ್ಯವನ್ನು ಕ್ಲೈ ಮಾಡುವುದಕ್ಕಾಗಿ ಒದಗಿಸಿರುವ ಯಾವುದಾದರೂ ಮಾಹಿತಿಯು ಅಸತ್ಯವೆಂದು ಕಂಡು ಬಂದಲ್ಲಿ ರಾಜ್ಯ ಸರ್ಕಾರವು ಸೂಕ್ತ ಕಾನೂನಿನಂತೆ ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ:

ದಿನಾಂಕ: ರೈತನ ಹೆಸರು ಮತ್ತು ಸಹಿ/ಹೆಬ್ಬೆರಳು.